# ದೊಡ್ಡವರ ದಾರಿ

**ಲೇಖಕ:** ಬೆ.ಗೋ ರಮೇಶ್

**ಜನನ:** 1945 ಆಗಸ್ಟ್ 22, ದೊಡ್ಡಹನಸೋಗೆ ಗ್ರಾಮ, ಮೈಸೂರು ಜಿಲ್ಲೆ, ಕೃಷ್ಣರಾಜನಗರ ತಾಲೂಕು

**ಕೃತಿಗಳು:** ಕನ್ನಡದಲ್ಲಿ 500 ಕ್ಕಿಂತಲೂ ಹೆಚ್ಚು ಕೃತಿಗಳು ವಿಶ್ವವಿಖ್ಯಾತ ಮಹಿಳೆಯರು, ನಮ್ಮ ಗಮಕಿಗಳು, ಕನ್ನಡ ಕವಿರತ್ನತ್ರಯರು, ವಿಜ್ಞಾನಿಗಳ ದೇಶಭಕ್ತರ ಜೀವನ ಚರಿತ್ರೆಗಳು, ವಚನಸಾಗರ.

**ಪ್ರಶಸ್ತಿಗಳು:** ವಚನ ಸಾಹಿತ್ಯ ಅಕಾಡೆಮಿ ಪ್ರಶಸ್ತಿ 600 ವಚನಗಳ ಸಂಕಲನ ವಚನಸಾಗರ ಕೃತಿಗೆ ಸರ್ ಎಂ.ವಿ. ನವರತ್ನ ಪ್ರಶಸ್ತಿ , ಡೆಪ್ಯುಟಿ ಚನ್ನಬಸಪ್ಪ ರಾಜ್ಯ ಪ್ರಶಸ್ತಿ.

FOR KANNADA

ಅ) ಆವರಣದಲ್ಲಿ ಕೊಟ್ಟಿರುವ ಪದಗಳಲ್ಲಿ ಸೂಕ್ತವಾದುದನ್ನು ಆರಿಸಿ ಬಿಟ್ಟಸ್ಥಳ ಭರ್ತಿಮಾಡಿರಿ. (Fill in the blanks)

೧. ಮಕ್ಕಳಿಗೆ ತಮ್ಮ ತಪ್ಪಿನ ಅರಿವಾಗಬೇಕು ಎಂದೆನಿಸಿತು .

೨. ಪ್ರಸಾದರು ಅವರಿಗೆಲ್ಲ ಅಷ್ಟಷ್ಟು ಕಾಸು ಕೊಟ್ಟರು .

೩. ವಿದ್ಯಾರ್ಥಿಗಳಿಗೆ ಬುದ್ಧಿ ಕಲಿಸಲು ತಾವೇ ಒಂದು ದಾರಿ ಕಂಡುಕೊಂಡರು .

೪. ಒಂದಿಬ್ಬರು ಪಾಲಿಶ್ ಹಾಕಿಸಿಕೊಂಡೂ ಆಗಿತ್ತು .

ಆ) ಕೊಟ್ಟಿರುವ ಪದ ಬಳಸಿ ಸ್ವಂತ ವಾಕ್ಯ ರಚಿಸಿರಿ. (Make your own sentences)

೧. ರಾಷ್ಟ್ರಪತಿ : ಡಾ. ರಾಜೇಂದ್ರ ಪ್ರಸಾದರು ನಮ್ಮ ರಾಷ್ಟ್ರಪತಿಗಳಾಗಿದ್ದರು.

೨. ಕಾಸು : ಡಾ. ರಾಜೇಂದ್ರ ಪ್ರಸಾದರು ಮಕ್ಕಳಿಗೆ ಕಾಸು ಕೊಟ್ಟರು.

೩. ಶಿಸ್ತು : ಡಾ. ರಾಜೇಂದ್ರ ಪ್ರಸಾದರು ಮಕ್ಕಳಿಗೆ ಶಿಸ್ತು ಕಲಿಸಿದರು.

೪. ದಾರಿ : ದೊಡ್ಡವರ ದಾರಿ ಪಾಠ ಬರೆದವರು  ಬೆ.ಗೋ ರಮೇಶ್.

ಇ) ಕೆಳಗಿನ ಪ್ರಶ್ನೆಗಳಿಗೆ ಒಂದು ವಾಕ್ಯದಲ್ಲಿ ಉತ್ತರಿಸಿರಿ. (Answer the following in one sentences)

೧. ರಾಜೇಂದ್ರ ಪ್ರಸಾದರು ತಾವು ಯಾರ ಸೇವಕ ಎಂದು ಹೇಳಿಕೊಳ್ಳುತ್ತಿದ್ದರು?

ಉ: ರಾಜೇಂದ್ರ ಪ್ರಸಾದರು ತಾವು ಜನರ ಸೇವಕ ಎಂದು ಹೇಳಿಕೊಳ್ಳುತ್ತಿದ್ದರು.

೨. ಪುಸ್ತಕದ ಪುಟಗಳನ್ನು ಹರಿದ ಮಕ್ಕಳಿಗೆ ಪ್ರಸಾದರು ಏನನ್ನು ಕೊಟ್ಟರು?

ಉ: ಪುಸ್ತಕದ ಪುಟಗಳನ್ನು ಹರಿದ ಮಕ್ಕಳಿಗೆ ಪ್ರಸಾದರು ಕಾಸು ಕೊಟ್ಟರು .

೩. ಯಾವುದು ಒಳ್ಳೆಯ ಅಭ್ಯಾಸವಲ್ಲ ಎಂದು ಪ್ರಸಾದರು ಮಕ್ಕಳಿಗೆ ಹೇಳಿದರು?

FOR KANNADA

ಉ: ಪುಸ್ತಕದ ಪುಟಗಳನ್ನು ಹರಿಯುವುದು ಒಳ್ಳೆಯ ಅಭ್ಯಾಸವಲ್ಲ ಎಂದು ಪ್ರಸಾದರು ಮಕ್ಕಳಿಗೆ ಹೇಳಿದರು .

ಕನ್ನಡಕ್ಕಾಗಿ ಇಲ್ಲಿ ಬನ್ನಿ

೪. ಜಾಮಿಯಾ ಮಿಲಿಯಾ ಎಲ್ಲಿದೆ?

ಉ: ಜಾಮಿಯಾ ಮಿಲಿಯಾ ದೆಹಲಿಯಲ್ಲಿದೆ.

೫. ಜಾಕಿರ್ ಹುಸೇನರು ವಿದ್ಯಾರ್ಥಿಗಳಿಗೆ ಬುದ್ಧಿ ಕಲಿಸಲು ಯಾವ ವೇಷ ಹಾಕಿದರು ?

ಉ: ಜಾಕಿರ್ ಹುಸೇನರು ವಿದ್ಯಾರ್ಥಿಗಳಿಗೆ ಬುದ್ಧಿ ಕಲಿಸಲು ಬೂಟ್ ಪಾಲಿಶ್ ಹಾಕುವವನ ವೇಶ ಹಾಕಿದರು .

ಈ) ಕೆಳಗಿನ ವಾಕ್ಯಗಳನ್ನು ಯಾರು ಯಾರಿಗೆ ಹೇಳಿದರು ? (who told whom)

೧. " ನೋಡಿ ಮಕ್ಕಳೇ , ಪುಸ್ತಕಗಳು ಜ್ಞಾನ ಭಂಡಾರ."

ಉ: ಈ ಮಾತನ್ನು ರಾಜೇಂದ್ರ ಪ್ರಸಾದರು ಮಕ್ಕಳಿಗೆ ಹೇಳಿದರು .

೨. “ತಾತಾ , ನಾವು ಇನ್ನು ಮುಂದೆ ಎಂದೂ ಪುಸ್ತಕಗಳ ಪುಟಗಳನ್ನು ಹರಿಯುವುದಿಲ್ಲ .”

ಉ: ಮಕ್ಕಳು ರಾಜೇಂದ್ರ ಪ್ರಸಾದರಿಗೆ ಈ ಮಾತನ್ನು ಹೇಳಿದರು.

ಉ) ಕೆಳಗಿನ ಪ್ರಶ್ನೆಗಳಿಗೆ ಮೂರು – ನಾಲ್ಕು ವಾಕ್ಯಗಳಲ್ಲಿ ಉತ್ತರಿಸಿರಿ. (Answer the following in 3-4 sentences)

೧. ರಾಜೇಂದ್ರ ಪ್ರಸಾದ್ ಅವರ ವ್ಯಕ್ತಿತ್ವವನ್ನು ವಿವರಿಸಿರಿ.

ಉ: ರಾಜೇಂದ್ರ ಪ್ರಸಾದ್ ಅವರ ವ್ಯಕ್ತಿತ್ವ ಪ್ರಶಂಸನೀಯವಾಗಿದ್ದು , ಅವರದು ಜನಕ ಮಹಾರಾಜನಂತೆ ಋಷಿ ಸದೃಶ ಜೀವನ , ಅವರು ಕೋಪವನ್ನು ಹತ್ತಿಕ್ಕಬಲ್ಲವರಾಗಿದ್ದು ಬಾಳಿನಲ್ಲಿ ಶಿಸ್ತು , ಸಂಯಮ , ಸಮಯ ಪಾಲನೆ ಇವುಗಳಿಗೆ ಭಾರಿ ಮಹತ್ವ ನೀಡುತ್ತಿದ್ದರು. ತಾವು ` ಜನರ ಸೇವಕ ' ಎಂದು ಹೇಳಿಕೊಳ್ಳುತ್ತಿದ್ದರು .

FOR KANNADA
ಕನ್ನಡಕ್ಕಾಗಿ ಇಲ್ಲಿ ಬನ್ನಿ

೨. ವಿದ್ಯಾರ್ಥಿಗಳಿಗೆ ಬುದ್ಧಿ ಕಲಿಸಲು ಜಾಕಿರ್‌ಹುಸೇನ್ ಏನು ಮಾಡಿದರು?

ಉ: ವಿದ್ಯಾರ್ಥಿಗಳಿಗೆ ಬುದ್ಧಿ ಕಲಿಸಲು ಜಾಕಿರ್ ಹುಸೇನ್‌ರವರು ವಿಶ್ವವಿದ್ಯಾನಿಲಯದ ಪ್ರವೇಶದ್ವಾರದಲ್ಲಿ ಒಬ್ಬ ಬೂಟ್ ಪಾಲಿಶ್ ಹಾಕುವವನ ವೇಶದಲ್ಲಿ , ಕೈಯಲ್ಲಿ ಪಾಲಿಶ್ ಡಬ್ಬಿ , ಬ್ರಷ್ ಹಿಡಿದು ಕುಳಿತಿದು , ಒಂದಿಬ್ಬರಿಗೆ ಪಾಲಿಶ್ ಕೂಡ ಮಾಡಿದ್ದರು .

ಊ) ವಚನ ಬದಲಿಸಿ ಬರೆಯಿರಿ. (Change to plural / singular)

ಗಿಡ – ಗಿಡಗಳು ತಮ್ಮಂದಿರು – ತಮ್ಮ

ಪತ್ರಗಳು – ಪತ್ರ ಮಗು – ಮಕ್ಕಳು

ಋ) ಪುಲ್ಲಿಂಗ ಅಥವಾ ಸ್ತ್ರೀಲಿಂಗ ರೂಪಕ್ಕೆ ಪರಿವರ್ತಿಸಿ ಬರೆಯಿರಿ. (Change the gender)

ಅವನು- ಅವಳು

ಇವಳು – ಇವಳು

ಗೌಡತಿ- ಗೌಡ

ಶರಣ – ಶರಣೆ

ಎ) ಕೆಳಗಿನವುಗಳಿಗೆ ನಾಲ್ಕು ಉದಾಹರಣೆಗಳನ್ನು ಕೊಡಿರಿ . (Give 4 examples to each nouns)

ಅನ್ವರ್ಥನಾಮ - ವ್ಯಾಪಾರಿ, ಕುಂಟ, ಶಿಕ್ಷಕ

ರೂಢನಾಮ - ನದಿಗಳು, ದೇಶ, ಪರ್ವತ,ಶಾಲೆ

ಅಂಕಿತನಾಮ – ಕೂಡಲಸಂಗಮದೇವ, ಪುರಂದರವಿಠಲ, ಶ್ರೀ ಚೆನ್ನ ಮಲ್ಲಿಕಾರ್ಜುನ, ಶಾಂತಿಪ್ರಿಯ

FOR KANNADA
ಕನ್ನಡಕ್ಕಾಗಿ ಇಲ್ಲಿ ಬನ್ನಿ